

ಚಂದ್ರನ ಮೇಲೆ ನೀಲ್ ಆರ್ಮ್‌ಸ್ಟ್ರಾಂಗ್ ಇಳಿದ ಕ್ಷಣ

ಹೋಗಲು ನಾಲ್ಕು ದಿನ ತೆಗೆದುಕೊಂಡರು. ಟ್ರಾಪಿಸ್ಟ್-1 ಭೂಮಿಯಿಂದ ಇರುವುದು, ಈ ಮುಂಚೆ ಹೇಳಿದಂತೆ, ಸುಮಾರು 40 ಜ್ಯೋತಿರ್ವರ್ಷ ದೂರ. ಜ್ಯೋತಿರ್ವರ್ಷ ಎಂದರೆ ಬೆಳಕು ಒಂದು ವರ್ಷದಲ್ಲಿ ಪಯಣಿಸುವಷ್ಟು ದೂರ. ಅದೆಷ್ಟು ಗೊತ್ತೇ? ಸೆಕೆಂಡಿಗೆ 3,00,000 ಕಿ.ಮೀ. ಲೆಕ್ಕದಲ್ಲಿ ಬೆಳಕು ಒಂದು ವರ್ಷದಲ್ಲಿ ಪಯಣಿಸುವ ದೂರ 946052,84,00,000 ಕಿ.ಮೀ. ಈ ಲೆಕ್ಕದಲ್ಲಿ ಟ್ರಾಪಿಸ್ಟ್-1 ನಕ್ಷತ್ರವ್ಯೂಹ ಇರುವುದು ನಮ್ಮಿಂದ 37842113,60,00,000 ಕಿ.ಮೀ. ದೂರದಲ್ಲಿ. ಭೂಮಿಯಿಂದ ಹೊರಟು ಬೆಳಕಿನ ವೇಗದಲ್ಲಿ ಹೊರಟರೂ ಅಲ್ಲಿಗೆ ತಲುಪಲು ನಮಗೆ 40 ವರ್ಷ ಬೇಕು. ಆದರೆ ಭೂಮಿಯ ಮೇಲಿಂದ ಹಾರಿಸಲಾದ ರಾಕೆಟುಗಳ ಅತ್ಯಂತ ಗರಿಷ್ಠ ವೇಗ ಸೆಕೆಂಡಿಗೆ 16 ಕಿ.ಮೀ. ಮಾತ್ರ (ಬೆಳಕಿನ ವೇಗ ಸೆಕೆಂಡಿಗೆ 3,00,000 ಕಿ.ಮೀ). ಇದೆಲ್ಲಾ ಲೆಕ್ಕಾಚಾರ ನೋಡಿದರೆ ಟ್ರಾಪಿಸ್ಟ್-1ರ ಬಳಿಗೆ ನಮ್ಮ ಯಾವುದೇ ಬಗೆಯ ಬಾಹ್ಯಾಕಾಶ ನೌಕೆಯನ್ನು ಕಳಿಸಲು ಸಾಧ್ಯವೇ ಇಲ್ಲದ ಮಾತು. ಹಾಗಾದರೆ ಇಲ್ಲಿ ಭೂಸದೃಶ ವಾಸಯೋಗ್ಯ ಪರಿಸ್ಥಿತಿ ಇದೆಯೇ? ಇಲ್ಲಿಯೂ ಜೀವಿಯ ವಿಕಾಸ ಆಗಿರಬಹುದೇ ಎಂಬುದನ್ನು ಅಧ್ಯಯನ ಮಾಡುವುದು ಹೇಗೆ?

ನಾಸಾ 2018ರಲ್ಲಿ ಉಡಾವಣೆ ಮಾಡಲಿರುವ ಜೇಮ್ಸ್ ವೆಬ್ ಟೆಲಿಸ್ಕೋಪ್ ಇವುಗಳ ಹೆಚ್ಚಿನ ಅಧ್ಯಯನಕ್ಕೆ ನೆರವಾಗಲಿದೆ. ಅದು ಈ ಗ್ರಹಗಳಲ್ಲಿನ ವಾತಾವರಣಗಳಲ್ಲಿ ನೀರು, ಮಿಥೇನ್ ಮತ್ತು ಆಕ್ಸಿಜನ್‌ಗಳ ಅಸ್ತಿತ್ವವನ್ನು ಗುರುತಿಸಿಕೊಡಲಿದೆ. ಟ್ರಾಪಿಸ್ಟ್-1ರ ಕುರಿತು ಈಗಾಗಲೇ ಹೇರಳವಾದ ಮಾಹಿತಿ ಅಂತರ್ಜಾಲದಲ್ಲಿ ಲಭ್ಯವಿದೆ. ಈ ಕುರಿತು ಮಾಹಿತಿ, ಚಿತ್ರಗಳು, ವಿಡಿಯೋಗಳು https://exoplanets.nasa.gov/trappist1/ ತಾಣದಲ್ಲಿ ಉಚಿತವಾಗಿ ಸಿಗುತ್ತವೆ. ಹಾಗೆಯೇ ನೀವು http://eyes.nasa.gov/eyes-on-exoplanets.html ತಾಣಕ್ಕೆ ಹೋಗಿ ಅಲ್ಲೊಂದು ಆಪ್‌ನ್ನು ಡೌನ್‌ಲೋಡ್ ಮಾಡಿಕೊಂಡರೆ ಟ್ರಾಪಿಸ್ಟ್-1 ಅಷ್ಟೇ ಅಲ್ಲ ಸೌರವ್ಯೂಹದ ಆಚೆ ಇರುವ ಹಲವಾರು ವಾಸಯೋಗ್ಯ ಗ್ರಹಗಳ ಕಾಲ್ಪನಿಕ ಭೇಟಿಯನ್ನೂ ಮಾಡಿ ಬರಬಹುದು.